ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

### ಬುಧವಾರ, ದಿನಾಂಕ: ೦೯ನೇ ಜುಲೈ ೨೦೧೪

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

**ವಲಯ ಅರಣ್ಯಾಧಿಕಾರಿಗಳು**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೮೧ (೧೦೨೩) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ಅರಣ್ಯಾಧಿಕಾರಿಗಳ ಸಂಖ್ಯೆ ಎಷ್ಟು ; ಸರ್ಕಾರದಿಂದ ಮಂಜೂರಾಗಿರುವ ವಲಯ ಅರಣ್ಯಾಧಿಕಾರಿಗಳ ಹುದ್ದೆಯ ಒಟ್ಟು ಸಂಖ್ಯೆ ಎಷ್ಟು ;

(ಆ) ಕೆ.ಸಿ.ಎಸ್.ಆರ್. ನಿಯಮ ೩೨ರ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ಅರಣ್ಯಾಧಿಕಾರಿಗಳ ಸಂಖ್ಯೆ ಎಷ್ಟು ;

(ಇ) ಕೆ.ಸಿ.ಎಸ್.ಆರ್. ನಿಯಮ ೩೨ರ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲು ವಲಯ ಅರಣ್ಯಾಧಿಕಾರಿಗಳಿಗೆ ಇರುವುದು ಕೇವಲ ೬ ತಿಂಗಳ ಕಾಲ ಅವಕಾಶವೆಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ೬ ತಿಂಗಳ ನಂತರ ವಲಯ ಅರಣ್ಯಾಧಿಕಾರಿಗಳನ್ನು ಮುಂದುವರೆಸಲು ಇಲಾಖೆಯಲ್ಲಿ ಸರ್ಕಾರದ ವತಿಯಿಂದ ಅನುಮತಿಯನ್ನು ಪಡೆದುಕೊಂಡಿವೆಯೇ ; (ವಿವರ ನೀಡುವುದು)

(ಈ) ಕೆ.ಸಿ.ಎಸ್.ಆರ್. ನಿಯಮ ೩೨ರ ಅಡಿಯಲ್ಲಿ ವಲಯ ಅರಣ್ಯಾಧಿಕಾರಿಗಳನ್ನು ನೇಮಿಸಿರುವುದರಿಂದ ಇಲಾಖೆಯಲ್ಲಿ ಉಪವಲಯ ಅರಣ್ಯಾಧಿಕಾರಿಗಳ ಹುದ್ದೆ ಕಡಿಮೆಯಾಗಿ ಅರಣ್ಯ ರಕ್ಷಣಾ ಕರ್ತವ್ಯಕ್ಕೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೈಗೊಂಡಿರುವ ಕ್ರಮಗಳೇನು ?

**ಅಂತರ್ಜಲದ ಕುಸಿತ**

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೨ (೯೮೩) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ – ಧಾರವಾಡ ಅವಳಿ ನಗರಗಳಲ್ಲಿ ಅಂತರ್ಜಲದ ಕುಸಿತದಿಂದಾಗಿ ಕೊಳವೆ ಬಾವಿಗಳು ಬತ್ತಿ ಹೋಗಿದ್ದು, ನೀರಿನ ಸಮಸ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಅವಳಿ ನಗರಗಳಲ್ಲಿನ ಅಂತರ್ಜಲದ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಸದರಿ ಅವಳಿ ನಗರಗಳಲ್ಲಿನ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ?

**ಅರಣ್ಯ ವಿಸ್ತೀರ್ಣ**

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೩ (೧೦೪೬) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ;

(ಆ) ಈ ಅರಣ್ಯ ಪ್ರದೇಶದ ಸುರಕ್ಷತೆಗೆ ಕೈಗೊಂಡ ಕ್ರಮಗಳೇನು ;

(ಇ) ಈ ಅರಣ್ಯ ಪ್ರದೇಶದ ವಿಸ್ತೀರ್ಣ ದಿನೇದಿನೇ ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

**ಮಹಿಳಾ ಕಾರ್ಮಿಕರಿಗೆ ಒದಗಿಸಬಹುದಾದ ಸೌಲಭ್ಯಗಳು**

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು)** –

೧೮೪ (೯೯೦) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರದ ಸುತ್ತಮುತ್ತಲ ಹಾಗೂ ರಾಜ್ಯದ ಇತರೆ ಕೈಗಾರಿಕಾ ಪ್ರದೇಶಗಳ ಗಾರ್ಮೆಂಟ್ಸ್ ಮತ್ತು ಇತರೆ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳೆಯರ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಮಹಿಳಾ ಕಾರ್ಮಿಕರು ತಾವು ಕರ್ತವ್ಯ ನಿರ್ವಹಿಸುತ್ತಿರುವ ಕೆಲಸದ ಸ್ಥಳಗಳಿಗೆ ಅವರ ಪಾಳಿ ಪದ್ಧತಿಗೆ ಅನುಗುಣವಾಗಿ ಬಂದು ಹೋಗಲು ಅವರ ಸುರಕ್ಷತೆ ಹಾಗೂ ಸಾರಿಗೆ ಅನುಕೂಲತೆ ದೃಷ್ಟಿಯಿಂದ ಯಾವ್ಯಾವ ಪೂರಕ ಕ್ರಮಗಳನ್ನು ಈವರೆಗೆ ಕೈಗೊಳ್ಳಲಾಗಿದೆ ; (ವಿವರಗಳನ್ನು ಒದಗಿಸುವುದು)

(ಇ) ಈವರೆಗೂ ಆ ರೀತಿಯ ಅನುಕೂಲತೆಗಳನ್ನು ಒದಗಿಸಲಾಗದಿದ್ದ ಪಕ್ಷದಲ್ಲಿ ಅದಕ್ಕೆ ಕಾರಣಗಳೇನು ; ಮುಂದಿನ ದಿನಗಳಲ್ಲಿ ಈ ಮಹಿಳಾ ಕಾರ್ಮಿಕರಿಗೆ ಅವಶ್ಯವಿರುವ ಪೂರಕ ಸೌಲಭ್ಯಗಳನ್ನು ಹಾಗೂ ಅನುಕೂಲತೆಗಳನ್ನು ಮಾಡಿಕೊಡಲು ಸರ್ಕಾರ ಬದ್ಧವಿದೆಯೇ ?

—

## ಹೊಸ ತಾಲ್ಲೂಕು ರಚನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೫ (೧೦೧೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ನೇಮಿಸಿದ ಸಮಿತಿಗಳಾವುವು ; ಯಾವ ಸಮಿತಿ ಯಾವ ಯಾವ ಸ್ಥಳಗಳನ್ನು ತಾಲ್ಲೂಕು ಕೇಂದ್ರ ಮಾಡಲು ಶಿಫಾರಸ್ಸು ಮಾಡಿದೆ ;

(ಆ) ಸರ್ಕಾರ ಹೊಸ ತಾಲ್ಲೂಕುಗಳ ರಚನೆ ಯಾವಾಗ ಮಾಡಲು ನಿರ್ಧರಿಸಿದೆ ?

## ಸಂಧ್ಯಾ ಸುರಕ್ಷಾ ಯೋಜನೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೬ (೯೯೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಮಾಸಿಕ ನಿವೃತ್ತಿ ವೇತನ ಪಡೆಯುತ್ತಿದ್ದವರ ಸಂಖ್ಯೆ ಎಷ್ಟು ; (ಬೆಂಗಳೂರು ನಗರ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಇವರಲ್ಲಿ ಎಷ್ಟು ಜನರಿಗೆ ಸಂಧ್ಯಾ ಸುರಕ್ಷಾ ಯೋಜನೆಯ ಮಾಸಿಕ ನಿವೃತ್ತಿ ವೇತನ ವಿತರಣೆಯನ್ನು ನಿಲ್ಲಿಸಲಾಗಿದೆ ; ಎಷ್ಟು ದಿವಸಗಳಿಂದ ನಿಲ್ಲಿಸಲಾಗಿದೆ ; ಇದಕ್ಕೆ ಕಾರಣಗಳೇನು ; ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು ;

(ಇ) ಎಷ್ಟು ಜನ ಕಡುಬಡವರು ಈ ವೇತನ ಅವಲಂಬಿಸಿ ತಮ್ಮ ಜೀವನ ನಡೆಸುತ್ತಿದ್ದು, ಇದ್ದಕ್ಕಿದ್ದ ಹಾಗೆ ಯಾವುದೇ ಪರಿಶೀಲನೆ ಇಲ್ಲದೆ ಈ ನಿವೃತ್ತಿ ವೇತನ ವಿತರಣೆಯನ್ನು ನಿಲ್ಲಿಸಿರುವುದು ಸರಿಯಾದ ಕ್ರಮವೇ ; ಈ ನಿವೃತ್ತಿ ವೇತನ ವಿತರಣೆಯನ್ನು ಕೂಡಲೇ ಪುನಃ ಪ್ರಾರಂಭಿಸಿ, ನಿಲ್ಲಿಸಿರುವ ತಿಂಗಳಿಂದ ಬಾಕಿ ಸಮೇತ ಫಲಾನುಭವಿಗಳಿಗೆ ನೀಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಪ್ರಯೋಗಾಲಯ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೭ (೧೦೧೮) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೈಗಾರಿಕೆಗಳು ಹೊರಬಿಡುವ ತ್ಯಾಜ್ಯ ನೀರು, ಹೊರಸೂಸುವ ಹೊಗೆ ಸೇರಿದಂತೆ ಇವುಗಳು ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಪರೀಕ್ಷಿಸಿ, ಪ್ರಮಾಣ ಪತ್ರ ನೀಡುವ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯವು ಯಾವ ಕಾಯ್ದೆ, ನಿಯಮದಡಿ ಸ್ಥಾಪನೆಯಾಗಿದೆ ; (ವಿವರ ಒದಗಿಸುವುದು)

(ಆ) ಪರಿಸರ ಪ್ರಯೋಗಾಲಯಗಳ ಸ್ಥಾಪನೆಗೆ ಇರುವ ಮಾರ್ಗಸೂಚಿಗಳು ಏನು ; ಮಾಲಿನ್ಯ ನಿಯಂತ್ರಣ ಮಂಡಳಿಗೆ ಯಾವ ರೂಪದ ಕೈಗಾರಿಕಾ ತ್ಯಾಜ್ಯ ಪರೀಕ್ಷಿಸಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಯಲ್ಲಿ ಇರುವ ಪರಿಸರ ಪ್ರಯೋಗಾಲಯಗಳು ಎಷ್ಟು ; ಇವುಗಳು ಯಾವ ಕಾಯ್ದೆಯಡಿ ಸ್ಥಾಪನೆಯಾಗಿವೆ ; ಯಾವ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿವೆ ; ಯಾವ ರೂಪದ ಕೈಗಾರಿಕಾ ತ್ಯಾಜ್ಯದ ಪರೀಕ್ಷೆಗಳನ್ನು ಇಲ್ಲಿ ನಡೆಸಲಾಗುತ್ತಿದೆ ; (ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ೨೦೧೯ರ ಪರಿಷ್ಕೃತ ಮಾರ್ಗಸೂಚಿಯನ್ವಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೇವಲ ತ್ಯಾಜ್ಯ ನೀರಿನ ಮಾದರಿಗಳನ್ನು ಪರೀಕ್ಷೆ ಮಾಡುವ ಅರ್ಹತೆ ಮಾತ್ರ ಇದ್ದರೂ, ಖಾಸಗಿ ಪ್ರಯೋಗಾಲಯಗಳಿಗೆ ಮಾನ್ಯತೆ ನೀಡಿರುವುದು ನಿಜವೇ ? (ಹಾಗಿದ್ದಲ್ಲಿ, ಅನುಮತಿಸಲಾದ ಖಾಸಗಿ ಪ್ರಯೋಗಾಲಯಗಳ ಸಂಖ್ಯೆ, ವಿವರ ಅವುಗಳ ಕಾರ್ಯನಿರ್ವಹಣೆ ಮಾದರಿ ಇವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು)

## ಕಟ್ಟಡ ಕಾರ್ಮಿಕರು ಸವಲತ್ತುಗಳಿಂದ ವಂಚಿತರು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೮ (೧೦೫೮) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ಕಟ್ಟಡ ಕಾರ್ಮಿಕರು ಹೆಚ್ಚಾಗಿ ಅವಿದ್ಯಾವಂತರಾಗಿದ್ದು, ಕಾರ್ಮಿಕ ಇಲಾಖೆಯಲ್ಲಿ ನೋಂದಾವಣಿ ಮಾಡದ ಇದ್ದು, ಸವಲತ್ತುಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಟ್ಟಡ ಕಾರ್ಮಿಕರನ್ನು ಕಡ್ಡಾಯ ನೋಂದಣಿಗೊಳಪಡಿಸಿ ಇಲಾಖಾ ಸವಲತ್ತುಗಳನ್ನು ಸದರಿಯವರು ಪಡೆಯುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಅರಣ್ಯ ಅಭಿವೃದ್ಧಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೯ (೧೦೩೧) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ೨೦೧೨ ರಿಂದ ೨೦೧೫ನೇ ಮೇ ತಿಂಗಳವರೆಗೆ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗೆ ಇನ್ನಿತರ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನ ಎಷ್ಟು ; (ಲೆಕ್ಕಶೀರ್ಷಿಕೆವಾರು ಅಂಕಿಅಂಶಗಳೊಂದಿಗೆ ಯೋಜನೆಗಳವಾರು ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ನೆಡುತೋಪು (ಪ್ಲಾಂಟೇಶನ್) ಯೋಜನೆಯ ಕಾಮಗಾರಿಯು ಯಾವ ವ್ಯಾಪ್ತಿಯಲ್ಲಿ ಎಷ್ಟು ಹೆಕ್ಟೇರಿನಲ್ಲಿ ಯಾವ ಗ್ರಾಮದ ಸರ್ವೆ ನಂ. ನಲ್ಲಿ ಮಾಡಲಾಗಿದೆ ; ಮಾಡಿದ್ದಲ್ಲಿ, ಇದಕ್ಕೆ ತಗುಲಿದ ಖರ್ಚು ವೆಚ್ಚ ಎಷ್ಟು ; (ಹೆಕ್ಟೇರ್‌ವಾರು ಮಾಹಿತಿ ನೀಡುವುದು)

(ಇ) ಕೂಲಿ ಕಾರ್ಮಿಕರಿಗೆ ನೀಡಿದ ಹಣ ಎಷ್ಟು ; ಆ ಕೂಲಿ ಕಾರ್ಮಿಕರ ಪಟ್ಟಿ ಮತ್ತು ಹೆಸರು, ಗ್ರಾಮ, ಗುತ್ತಿಗೆ ನೀಡಿದಲ್ಲಿ ಗುತ್ತಿಗೆದಾರರ ಹೆಸರುಗಳು, ಅಂಕಿ–ಅಂಶಗಳೊಂದಿಗೆ ತಾಲ್ಲೂಕುವಾರು, ಯೋಜನೆಗಳವಾರು, ವರ್ಷವಾರು ಮಾಹಿತಿ ನೀಡುವುದು ;

(ಈ) ಯಾವ ಯಾವ ಗಿಡಗಳನ್ನು ನೆಡಲಾಗಿದೆ ; ಅವುಗಳ ಹೆಸರು ಮತ್ತು ಫೋಟೋಗಳೊಂದಿಗೆ ಮಾಹಿತಿ ನೀಡುವುದು ?

## ಅರಣ್ಯವಾಸಿಗಳ ಹಕ್ಕುಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೯೦ (೧೦೩೩) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುಸೂಚಿತ ಬುಡಕಟ್ಟು ಮತ್ತಿತರ ಪಾರಂಪರಿಕ ಅರಣ್ಯ ವಾಸಿಗಳ ಹಕ್ಕುಗಳನ್ನು ಮಾನ್ಯ ಮಾಡಲು ಕೇಂದ್ರ ಸರ್ಕಾರ ೨೦೦೬ರಲ್ಲಿ ಜಾರಿಗೊಳಿಸಿದ ಶಾಸನದ ಪ್ರಕಾರ ರಾಜ್ಯದಲ್ಲಿ ಶೇಕಡಾ ಸುಮಾರು ಎಷ್ಟು ಆದಿವಾಸಿಗಳು ಅರ್ಜಿ ಸಲ್ಲಿಸಿರುತ್ತಾರೆ ;

(ಆ) ಯಾವ ಕಛೇರಿಗಳಲ್ಲಿ ಅವರು ಅರ್ಜಿಗಳನ್ನು ನೀಡಬೇಕಾಗಿದೆ ; (ವಿವರ ನೀಡುವುದು)

(ಇ) ದಿನಾಂಕ : ೩೦.೦೬.೨೦೧೪ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗದಿಯಾಗಿರುವುದು ನಿಜವೇ ;

(ಈ) ಈ ಕುರಿತು ಅರಣ್ಯವಾಸಿಗಳಿಗೆ ಮನವರಿಕೆ ಮಾಡಲು ಯಾವ ರೀತಿಯ ಪ್ರಚಾರ ಕಾರ್ಯ ಕೈಗೊಳ್ಳಲಾಗಿದೆ ?

## ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೧ (೧೦೦೧) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಯೋಚಿಸಲಾಗಿದೆಯೇ ;

(ಆ) ಯಾವ ವರ್ಷ ಪ್ರಾರಂಭಿಸಲಾಗುವುದು ;

(ಇ) ಈ ಬಗ್ಗೆ ಪ್ರಸ್ತಾವನೆ ಯಾವ ಹಂತದಲ್ಲಿದೆ ? (ವಿವರ ನೀಡುವುದು)

## ಜಮೀನು ತಿದ್ದುಪಡಿಗೆ ತಹಶೀಲ್ದಾರ್‌ರವರಿಗೆ ಅಧಿಕಾರ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೧೯೨ (೧೦೬೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ರೈತರ ಜಮೀನುಗಳ ಸಣ್ಣ–ಪುಟ್ಟ ದೋಷಗಳಿಗೆ ತಿದ್ದುಪಡಿ ಕೋರಿ ರೈತರು ಹಲವಾರು ಬಾರಿ ತಹಶೀಲ್ದಾರ್‌ರವರ ಕಛೇರಿಗೆ ಸುತ್ತಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಣ್ಣ–ಪುಟ್ಟ ತಿದ್ದುಪಡಿ ಮಾಡಲು ಉಪವಿಭಾಗ ಅಧಿಕಾರಿಗಳಿಗೆ ಇರುವ ಅಧಿಕಾರವನ್ನು ತಾಲ್ಲೂಕು ತಹಶೀಲ್ದಾರ್‌ರವರಿಗೆ ವಹಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ ;

(ಇ) ರೈತರ ಕಷ್ಟವನ್ನು ನಿವಾರಿಸಲು ಸರ್ಕಾರ ಕಟಿಬದ್ಧವಾಗಿದ್ದು, ಈ ವಿಷಯದಲ್ಲಿ ಕೂಡಲೇ ಸ್ಪಂದಿಸಿ ರೈತರ ಬೇಡಿಕೆ ಈಡೇರಿಸಲಾಗುವುದೆ ?

## ಅಸಂಘಟಿತ ಕಾರ್ಮಿಕರ ಸೌಲಭ್ಯಗಳು

**ಶ್ರೀಮತಿ ತಾರಾಅನೂರಾಧ** (**ನಾಮನಿರ್ದೇಶನ ಹೊಂದಿದವರು**) –

೧೯೩ (೧೦೨೯) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಸಂಘಟಿತ ಕಾರ್ಮಿಕರುಗಳಿಗಾಗಿ ಕೇಂದ್ರ/ರಾಜ್ಯ ಸರ್ಕಾರಗಳು ರೂಪಿಸಿ, ಜಾರಿಗೊಳಿಸುತ್ತಿರುವ ಸೌಲಭ್ಯ ಕಾರ್ಯಕ್ರಮ, ಯೋಜನೆಗಳು ಯಾವುವು ;

(ಆ) ಚಲನಚಿತ್ರ ರಂಗದ ಕಲಾವಿದರು, ತಂತ್ರಜ್ಞರು ಮತ್ತು ಕಾರ್ಮಿಕರುಗಳು ಅಸಂಘಟಿತ ಕಾರ್ಮಿಕರ ವ್ಯಾಪ್ತಿಗೆ ಒಳಪಟ್ಟಿದ್ದರೂ, ಮಾಹಿತಿ/ಪ್ರಚಾರದ ಕೊರತೆಯಿಂದ ಈ ರಂಗದ ಬಹುತೇಕರು ಯಾವುದೇ ಸೌಲಭ್ಯಗಳನ್ನು ಪಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ತಕ್ಷಣದಿಂದಲೇ ಮಾಹಿತಿ/ಪ್ರಚಾರದ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳುವುದೇ ?

## ಕೃಷ್ಣಾ ನದಿ ನೀರಿನ ಹಂಚಿಕೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೪ (೧೦೨೦) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಚಾವತ್ ಆಯೋಗದ ತೀರ್ಪಿನ ಅನ್ವಯ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಕೃಷ್ಣಾ ನದಿ ನೀರಿನ ಹಂಚಿಕೆಯಲ್ಲಿ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ೫೨೪ ಮೀಟರ್‌ಗೆ ಎತ್ತರಿಸಲು ಅನುಮತಿಸಿದ್ದು ನಿಜವೇ ;

(ಆ) ಹಾಗಿದ್ದಲ್ಲಿ, ಈ ಎತ್ತರವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಇದರಿಂದ ಒಟ್ಟು ಹೆಚ್ಚುವರಿಯಾಗಿ ರಾಜ್ಯಕ್ಕೆ ಲಭ್ಯವಾಗಲಿರುವ ನೀರಿನ ಪ್ರಮಾಣವೆಷ್ಟು ;

(ಈ) ಹೆಚ್ಚುವರಿಯಾಗಿ ನೀರಾವರಿಗೆ ಒಳಪಡುವ ಕ್ಷೇತ್ರವೆಷ್ಟು ;

(ಉ) ಇದನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರವು ಕಾಲಬದ್ಧ ಮತ್ತು ಕ್ರಮಬದ್ಧ ಯೋಜನೆಗಳನ್ನು ಹಾಕಿಕೊಂಡಿದೆಯೇ ?

## ಕರಾವಳಿ ಭಾಗದಲ್ಲಿ ಬಂದರು ಅಭಿವೃದ್ಧಿ ಕಾರ್ಯ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೫ (೯೯೧) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯ ಕರಾವಳಿ ವಿಭಾಗದಲ್ಲಿರುವ ಬಂದರು ಪ್ರವೇಶಗಳೆಷ್ಟು ; ಇವುಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಇವುಗಳಲ್ಲಿ ಸಾಂಪ್ರದಾಯಿಕ ಬಂದರುಗಳೆಷ್ಟು ; ಮೀನುಗಾರಿಕೆ ಹಾಗೂ ವ್ಯಾಪಾರ ವಹಿವಾಟು, ವಾಣಿಜ್ಯ ಉದ್ದೇಶದ ಬಂದರುಗಳೆಷ್ಟು ;

(ಇ) ಈ ಎಲ್ಲಾ ಬಂದರುಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಮತ್ತು ಬಂದರು ನಿರ್ಮಾಣ ನಿರ್ವಹಣೆಗಾಗಿ ಖರ್ಚಾಗುವ ಹಣವೆಷ್ಟು ? (ಅಳಿವಿನಂಚಿನಲ್ಲಿರುವ ಬಂದರು ಅಭಿವೃದ್ಧಿಗೆ ಹಾಗೂ ಸಮುದ್ರ ಕೊರೆತ ತಡೆಗೆ ಕೈಗೊಂಡ ಕ್ರಮಗಳ ಬಗ್ಗೆ ಪೂರ್ಣ ವಿವರ ಒದಗಿಸುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ8, ಕಾ.ಸೂ. 326, ಪ್ರತಿಗಳು 1500